ಭದ್ರಾ ಮೇಲ್ದಂಡೆ ಯೋಜನೆಯ ಅಂದಾಜು ಮತ್ತು ನಕ್ಷೆ.

2251(2782)

ಶ್ರೀ ಬಿ.ಆರ್. ನೀಲಕಂಠಪ್ಪ(ತರೀಕೆರೆ): ಮಾನ್ಯ ಭಾರಿ ಮತ್ತುಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾ ಮೇಲ್ದಂಡೆ ಯೋಜನೆಯ ಅಂದಾಜು ಮತ್ತು ನಕ್ಷೆ ತಯಾರಾಗಿದೆಯೇ?

ಆ) ಈ ಯೋಜನೆಯಿಂದ ಎಷ್ಟು ಜಿಲ್ಲೆಗಳಿಗೆ ನೀರಾವರಿ ಸೌಲಭ್ಯ ದೊರಕಲಿದೆ?

ಶ್ರೀ ಎಚ್.ಕೆ.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ಇಲ್ಲ.

ಆ) ವಿವರವಾದ ಸರ್ವೆ ಕಾರ್ಯ ಪ್ರಗತಿಯಲ್ಲಿದ್ದು ಇದು ಪೂರ್ಣಗೊಂಡ ನಂತರ ಈ ಮಾಹಿತಿ ಲಭ್ಯವಾಗುವುದು.

ತರೀಕೆರೆ ತಾಲ್ಲೂಕು ಕುಡ್ಲೂರು ಕೆರೆಗೆ ದೇವನ ಕೆರೆಯಿಂದ ನೀರು.

2252(2784)

ಶ್ರೀ ನೀಲಕಂಠಪ್ಪ ಬಿ.ಆರ್(ತರೀಕೆರೆ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕು ಕುಡ್ಲೂರು ಕೆರೆಗೆ ಬೀರೂರು ದೇವನಕೆರೆಯಿಂದ ಪೋಷಾಕು ಕಾಲುವೆ ನಿರ್ಮಿಸಿ ನೀರು ಒದಗಿಸಲು ಅಂದಾಜು ಮತ್ತು ನಕ್ಷೆ ತಯಾರಾಗಿದೆಯೆ?

ಆ) ಈ ಯೋಜನೆಯಿಂದ ಸುಮಾರು ಸಾವಿರ ಎಕರೆ ಅಡಿಕೆ ತೋಟಗಳಿಗೆ ಅನುಕೂಲವಾಗುವ ನೀರಿನ ಸೌಲಭ್ಯದ ಯೋಜನೆಯನ್ನು ಈ ವರ್ಷ ಕಾರ್ಯಗತ ಮಾಡುವಿರಾ?

ಇ) ಈ ವರ್ಷದ ಆಯವ್ಯಯದಲ್ಲಿ ಇದಕ್ಕೆ ಎಷ್ಟು ಹಣ ಮೀಸಲಿರಿಸಿದ್ದೀರಿ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ತಯಾರಿಸಲಾಗಿದೆ

ಆ) ತಾಂತ್ರಿಕ ಶಕ್ಯತೆ ಹಾಗೂ ಆರ್ಥಿಕ ಲಭ್ಯತೆಯನ್ನು ಆಧರಿಸಿ ಕ್ರಮ ಕೈಗೊಳ್ಳಲಾಗುವುದು.

ಇ) ಪರಿಶೀಲನೆಯಲ್ಲಿದೆ.

ತರೀಕೆರೆ ತಾಲ್ಲೂಕು ಶಿವನಿಯಲ್ಲಿ ಪೊಲೀಸ್ ಠಾಣೆಯನ್ನು ತೆರೆಯುವ ಬಗ್ಗೆ.

2253(ಎಸ್‌ಕೆ)

ಶ್ರೀ ನೀಲಕಂಠಪ್ಪ ಬಿ.ಆರ್(ತರೀಕೆರೆ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕಿನ ಶಿವನಿಯಲ್ಲಿ ಪೋಲೀಸ್ ಠಾಣೆ ತೆರೆಯುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೆ;

ಆ) ಹಾಗಿದ್ದಲ್ಲಿ ಎಂದಿನಿಂದ ತೆರೆಯಲಾಗುವುದು?

ಶ್ರೀ ಮಲ್ಲಿಕಾರ್ಜುನ.ಎಂ. ಖರ್ಗೆ (ಗೃಹ ಸಚಿವರು):

ಅ ಮತ್ತು ಆ) ಪ್ರಸಕ್ತ ಆರ್ಥಿಕ ವರ್ಷದಲ್ಲಿ ೧೦ ಪೊಲೀಸು ಠಾಣೆಗಳನ್ನು ತೆರೆಯಲುದ್ದೇಶಿಸಲಾಗಿದೆ. ಪೊಲೀಸ್ ಠಾಣೆಗಳು ಅತ್ಯಗತ್ಯವಿರುವಂತಹ ಸ್ಥಳಗಳನ್ನು ಗುರುತಿಸಿ, ಅಂತಹ ಸ್ಥಳಗಳಲ್ಲಿ ಪೊಲೀಸು ಠಾಣೆಗಳನ್ನು ತೆರೆಯಲಾಗುವುದು.

ರಾಜ್ಯದಲ್ಲಿ ಭೂ ವಿವಾದಗಳಿಂದಾಗಿ ಅಪರಾಧಗಳು ಹೆಚ್ಚುತ್ತಿರುವ ಬಗ್ಗೆ.

2254(2815)

ಶ್ರೀ ಆರ್.ನಾರಾಯಣ(ಬೆಳ್ಳಾವಿ): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಭೂ ವಿವಾದಗಳಿಂದಾಗಿ ಅಪರಾಧಗಳ ಸಂಖ್ಯೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಲ್ಯಾಂಡ್ ಮಾಫಿಯಾಗಳು ಇತ್ತೀಚೆಗೆ ತಲೆ ಎತ್ತುತ್ತಿರುವುದು ಸರ್ಕಾರದ